# ಸಾಮೂಹಿಕ ಕಲ್ಯಾಣ ಮಹೋತ್ಸವ

**ಚಿತ್ರದುರ್ಗ, ಜು. 5 :** ಆಷಾಡ ಅಶುಭವಲ್ಲ ಎನ್ನುವುದಕ್ಕೆ ಸಾಮೂಹಿಕ ಕಲ್ಯಾಣ ಕಾರ್ಯಕ್ರಮ ಸಾಕ್ಷಿಯಾಗಿದೆ. ಯಾವ ಮಾಸಗಳೂ ಕನಿಷ್ಠವಲ್ಲ ಎಲ್ಲವೂ ಶ್ರೇಷ್ಠ. ಆಷಾಡ ಮಾಸದಲ್ಲಿ ಇಷ್ಟೊಂದು ಮದುವೆ ಆಗುತ್ತಿರುವುದು ಬಸವಾದಿ ಶರಣರಿಗೆ ಸಲ್ಲುವ ಗೌರವವಾಗಿದೆ ಎಂದು ಶ್ರೀ ಬಸವಪ್ರಭು ಸ್ವಾಮಿಗಳು ನುಡಿದರು.

ನಗರದ ಬಸವಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ) ಚಿತ್ರದುರ್ಗ ಇವರ ಸಹಯೋಗದಲ್ಲಿ ನಡೆದ ಮೂವತ್ತೆರಡನೆ ವರ್ಷದ ಏಳನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವ ಕಾರ್ಯಕ್ರಮದ ಸಮ್ಮುಖ ವಹಿಸಿ ಶ್ರೀಗಳು ಮಾತನಾಡಿದರು.

ಸಂಸಾರ ಜೀವನ ಯಶಸ್ವಿಯಾಗಲು ಸತಿ-ಪತಿಗಳು ಹೊಂದಿಕೊಡು ಹೋಗಬೇಕು. ಸತಿ-ಪತಿಗಳದು ಎರಡು ಹೃದಯಗಳ ಸಂಬಂಧ. ಸ್ನೇಹಿತರಂತೆ ಇರಬೇಕು. ಹೆಂಡತಿ ತನ್ನ ಸೇವಕಿ ಎನ್ನುವ ಭಾವನೆ ಇರಬಾರದು. ಎಲ್ಲರೂ ಸಮಾನರು. ಸಾಮರಸ್ಯದ ಬದುಕು ನಮ್ಮದಾಗಬೇಕು. ಅತ್ತೆ-ಸೊಸೆ ಸಂಬಂಧ ತಾಯಿ-ಮಗಳಂತೆ ಇರಬೇಕು. ಆಗ ಮಾತ್ರ ಸಂಸಾರ ಸಸಾರವಾಗುತ್ತದೆ. ಸದ್ಗತಿ ಹೊಂದಲು ಸಾಧ್ಯವಾಗುತ್ತದೆ. ಮುರುಘಾ ಶರಣರ ಯೋಜನೆಗಳು ಇತಿಹಾಸವಾಗಿವೆ. ಸರಳ ಸಾಮೂಹಿಕ ಕಲ್ಯಾಣ ಕಾರ್ಯಕ್ರಮ ಬಡವರಿಗಾಗಿ ಮಾಡಿರುವ ಯೋಜನೆಯಾಗಿದ್ದು, ಮೂವತ್ತೆರಡು ವರ್ಷ ಪೂರೈಸಿ ನಿರಂತರವಾಗಿ ಮುನ್ನಡೆದಿದೆ. ಇದು ಇತಿಹಾಸದಲ್ಲಿ ದಾಖಲಾಗುವಂಥದ್ದು.

ಮುಖ್ಯಅತಿಥಿ ಶಿಕ್ಷಣಾಧಿಕಾರಿ ವಿ.ತಿಪ್ಪೇಸ್ವಾಮಿ ಮಾತನಾಡಿ, ಶ್ರೀಮಠವು ಅನೇಕ ರೀತಿಯ ಪರಿವರ್ತನಪರ ಕಾರ್ಯಗಳನ್ನು ಮಾಡುತ್ತಿದೆ. ಬಸವಣ್ಣನವರ ತತ್ವಗಳನ್ನು ಇಟ್ಟುಕೊಂಡು ಅವರ ಹಾದಿಯಲ್ಲಿ ಶ್ರೀಮಠ ಸಾಗುತ್ತಿದೆ. ವಿವಾಹ ಕಾರ್ಯಕ್ರಮದಲ್ಲಿ ಶಿಸ್ತುಪಾಲನೆ ಆಗುತ್ತಿರುವುದು ತುಂಬಾ ಸಂತೋಷ. ನವ ಜೋಡಿಗಳು ಉತ್ತಮ ಸಂಸ್ಕಾರ ಇಟ್ಟುಕೊಳ್ಳುವುದರೊಂದಿಗೆ ಸಮಾಜವನ್ನು ಉತ್ತಮ ರೀತಿಯಲ್ಲಿ ಕೊಂಡೊಯ್ಯಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಆದಿಕರ್ನಾಟಕ-07, ನಾಯಕ-03 ಮತ್ತು ಮಡಿವಾಳ, ನೇಕಾರ, ಲಿಂಗಾಯತ, ಕುರುಬ ತಲಾ ಒಂದು ಹಾಗು ಪದ್ಮಶಾಲಿ (ವರ) - ನಾಯಕ (ವಧು) ಅಂತರ್ಜಾತಿ ವಿವಾಹ ಸೇರಿದಂತೆ ಒಟ್ಟು 15 ಜೋಡಿಗಳ ವಿವಾಹ ನೆರವೇರಿತು. ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎಸ್.ಕೆ. ಬಸವರಾಜನ್, ಜಂಟಿ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಆಡಳಿತ ಮಂಡಳಿ ಸದಸ್ಯ ಕೆಇಬಿ ಷಣ್ಮುಖಪ್ಪ, ಪೈಲ್ವಾನ್ ತಿಪ್ಪೇಸ್ವಾಮಿ, ಎನ್.ತಿಪ್ಪಣ್ಣ ಮೊದಲಾದವರಿದ್ದರು. ಚಿನ್ಮಯದೇವರು ಸ್ವಾಗತಿಸಿದರು. ಪ್ರಕಾಶ ದೇವರು ನಿರೂಪಿಸಿದರು.






ಮೂವತ್ತೆರಡನೇ ವರ್ಷದ ಏಳನೇ ತಿಂಗಳ
ಸಾಮೂಹಿಕ ಕಲ್ಯಾಣ


ಮೂವತ್ತೆರಡನೇ ವರ್ಷದ ಏಳನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ